Tumbe Group of International Journals

# ಮಾನವ ಹಕ್ಕುಗಳು ಹಾಗೂ ಬುಡಕಟ್ಟು ಜನಾಂಗ

[1] Dr. ASHWAKH AHAMED B A

Publication
Tumbe
Group of International Journals
A Peer Reviewed Multidisciplinary Journal
Volume - 5 ; Issue – 1
January - April : 2022
ISSN : 2581-8511
Pages : 62 -66
Article ID : TUMBE0501K9

Author/s

[1]Assistant Professor of Sociology
Govt. First Grade College, Tumkur,
Karnataka (INDIA)
ashwakhahamed71@gmail.com

## ಸಾರಾಂಶ /Abstract

ಭಾರತೀಯ ಸಮಾಜದ ಅತ್ಯಂತ ಕೆಳಸ್ತರದಲ್ಲಿರುವ ಒಂದು ಪ್ರಮುಖ ಜನವರ್ಗವನ್ನು ಕಾನೂನಿನ ಪರಿಭಾಷೆಯಲ್ಲಿ ಪರಿಶಿಷ್ಟ ಪಂಗಡಗಳು ಎಂದು ಕರೆಯಲಾಗುತ್ತದೆ. ಈ ವರ್ಗದ ಜನರು ದೇಶದ ಉದ್ದಗಲಕ್ಕೂ ವ್ಯಾಪಿಸಿದ್ದಾರೆ. ಇವರು ಶತಮಾನಗಳು ಕಳೆದರೂ ಸಹಾ ಹಲವು ಬಗೆಯ ಅನರ್ಹತೆ, ಶೋಷಣೆ ಹಾಗೂ ಸಮಸ್ಯೆಗಳಿಗೆ ಒಳಗಾಗಿದ್ದಾರೆ. ಈ ಸಮೂಹದ ಜನವರ್ಗ ಮುಗ್ಧತೆ ಮತ್ತು ಸರಳತೆಯಿಂದ ಜೀವನ ನಡೆಸುತ್ತಿದ್ದಾರೆ. ದೇಶದ ಹಲವು ರಾಜ್ಯಗಳಲ್ಲಿ ವೈವಿಧ್ಯಮಯ ಜೀವನವನ್ನು ಮತ್ತು ಅವರನ್ನು ಕಾಡುವ ಸಮಸ್ಯೆಗಳೊಟ್ಟಿಗೆ ಜೀವಿಸುತ್ತಿದ್ದಾರೆ. ಬೆಟ್ಟ ಗುಡ್ಡಗಳಲ್ಲಿ ಕಣಿವೆ ಕಾನನಗಳಲ್ಲಿ ತಮ್ಮದೆ ವಿಶಿಷ್ಟ ಸಂಸ್ಕೃತಿಯೊಂದಿಗೆ ಜೀವಿಸುತ್ತಿದ್ದಾರೆ. ಈ ನಿಟ್ಟಿನಲ್ಲಿ ಇವರ ವೈವಿಧ್ಯಮಯ ಜೀವನ ಮತ್ತು ಅವರನ್ನು ಕಾಡುತ್ತಿರುವ ಸಮಸ್ಯೆಗಳನ್ನು ಅರ್ಥೈಸಿಕೊಳ್ಳುವುದು ನಾಗರೀಕ ಸಮುದಾಯದ ಕರ್ತವ್ಯವಾಗಿದೆ.

**ಕೀವರ್ಡ್ಸ್:** ಬುಡಕಟ್ಟು, ಪ್ರತ್ಯೇಕತೆ, ಪರಕೀಯ, ಮಾನವ ಹಕ್ಕು, ಸಂಸ್ಕೃತಿ ಪದ್ಧತಿ

**ಪೀಠಿಕೆ**

ಬುಡಕಟ್ಟು ಜನಾಂಗವರನ್ನು ಮಾನವರು ಎಂದು ಪರಿಗಣಿಸಿದರೆ ಮಾನವ ಹಕ್ಕುಗಳು ಮಹತ್ವ ಪೂರ್ಣವಾಗಿರುತ್ತವೆ. ಆದರೆ ಬಹಳಷ್ಟು ಸಂದರ್ಭಗಳಲ್ಲಿ ಇವರನ್ನು ಮಾನವರಂತೆ ನೆಡೆಸಿಕೊಳ್ಳದಿರುವುದು ನಿಜಕ್ಕೂ ದುರಾದೃಷ್ಟಿಕರವಾಗಿದೆ. ಆದಿವಾಸಿಗಳಿಗೆ ಸಂವಿಧಾನಿಕ ಸವಲತ್ತುಗಳು, ಯೋಜನೆಗಳು, ಸಮಿತಿಗಳು, ಆಯೋಗಗಳು, ಆದಿವಾಸಿ ನೀತಿಗಳು, ಕಲ್ಯಾಣ ಕಾರ್ಯಕ್ರಮಗಳು, ಮಾನವ ಹಕ್ಕುಗಳ ರಕ್ಷಣೆಗಾಗಿ ಆಯೋಗವನ್ನು ಸಹ ರಚಿಸಲಾಗಿದೆ. ಈ ಎಲ್ಲಾ ಪ್ರಯತ್ನಗಳ ಮೂಲಕ ಆದಿವಾಸಿಗಳನ್ನು ಅಭಿವೃದ್ಧಿ ಪಡಿಸಿ ಸಮಾಜದ ಮುಖ್ಯವಾಹಿನಿಗೆ ತರುವ ಪ್ರಯತ್ನಗಳು ನಿರಂತರವಾಗಿ ನೆಡೆಸಲಾಗುತ್ತಿದೆ.

**ಬುಡಕಟ್ಟು ಜನಾಂಗ ಅಥವಾ ಆದಿವಾಸಿಗಳು ಯಾರು**

1) **ಮಜುಮ್ ದಾರ್** :- ಒಂದೇ ನಾಮದೇಯವನ್ನು ಹೊಂದಿರುವ ಒಂದೇ ಭೂ ನೆಲೆಯಲ್ಲಿ ವಾಸಿಸುವ ಒಂದೇ ಭಾಷೆಯನ್ನುಡುವ ಮತ್ತು ವಿವಾಹ ಉದ್ಯೋಗಗಳಿಗೆ ಸಂಬಂಧಿಸಿದಂತೆ ಒಂದೇ ಬಗೆಯ ವಿಧಿ-ನಿಷೇಧಗಳಿಗೆ ಬದ್ಧವಾದ ಕುಟುಂಬಗಳ ಸಮೂಹವನ್ನು ಆದಿವಾಸಿ ಸಮೂಹ ಎಂದು ಕರೆಯಬಹುದು.

2) **ಗಿಲಿನ್ ಮತ್ತು ಗಿಲಿನ್** :- ಒಂದು ಸ್ಥಳದಲ್ಲಿ ವಾಸಿಸುತ್ತಾ ಒಂದೇ ಭಾಷೆಯನ್ನು ಮಾತನಾಡುವ ಮತ್ತು ಒಂದು ಸಂಸ್ಕೃತಿಯನ್ನು ಹೊಂದಿರುವ ಸ್ಥಳೀಯ ಸಮುದಾಯಗಳ ಸಮೂಹಕ್ಕೆ ಆದಿವಾಸಿ ಸಮಾಜ ಎನ್ನಬಹುದು.

3) **ಬೊಗಾರ್ಡ್ ಸ್** :- ರಕ್ಷಣೆಯ ಅವಶ್ಯಕತೆ ರಕ್ತ ಸಂಬಂಧ ಒಂದೇ ಧರ್ಮದ ನೆಲೆ ಇವುಗಳ ಆಧಾರದ ಮೇಲೆ ನಿಂತಿರುವ ಸಮುದಾಯವೆ ಆದಿವಾಸಿ ಸಮೂಹವಾಗಿದೆ.

4) **ಎಸ್.ಸಿ ದುಬೆ** :- ಆದಿವಾಸಿ ಸಮೂಹವು ವಿಶಾಲವ್ಯಾಪ್ತಿಯ ಸಾಂಸ್ಕೃತಿಕ ಲಕ್ಷಣಗಳನ್ನು ಸಾಮಾನ್ಯವಾಗಿ ಹಂಚಿಕೊಂಡಿರುವ, ವಾಸ್ತವಿಕವಾದ ಇಲ್ಲವೆ, ವಾಸ್ತವಿಕವೆಂದು ಪ್ರತೀತಿ ಇರುವ ವಂಶಾವಳಿಯನ್ನು ಹೊಂದಿದ ಮತ್ತು ಸಾಮೂಹಿಕ ಸ್ವರೂಪ ಹೊಂದಿರುವ ಜನಾಂಗೀಯ ಇಲ್ಲವೇ ಮಾನವ ಬುಡಕಟ್ಟಾಗಿದೆ.

ಬುಡಕಟ್ಟು ಜನಾಂಗವನ್ನು ವಿವಿಧ ಹೆಸರುಗಳಿಂದ ಕರೆಯಲಾಗುತ್ತದೆ. ಅವುಗಳೆಂದರೆ ಆದಿವಾಸಿಗಳು , ಆದಿಪ್ರಜಾ, ವನವಾಸಿ, ವನ್ಯಜೀವಿ, ಎಬೊರಿಜಿನಲ್ಸ್, ಹಿಲ್ ಟ್ರೈಬ್ಸ್, ಜಂಗಲ್ ಪೀಪಲ್, ಮಹಾತ್ಮಗಾಂಧಿಯವರು ಗಿರಿಜನರು ಎಂದು ಕರೆದಿದ್ದಾರೆ. ಟ್ರೈಬ್ಸ್ ಎಂಬ ಇಂಗ್ಲಿಷ್ ಪದವು ಲ್ಯಾಟಿನ್ ಭಾಷೆಯ ಟ್ರೈಬಸ್ ಎಂಬ ಪದದಿಂದ ಉತ್ಪತ್ತಿಯಾಗಿದೆ. ಈ ಪದದ ಅರ್ಥ ಪ್ರಾಚೀನ ರೋಮ್ ಜನತೆಯ ರಾಜಕೀಯ ಭಾಗ ಅಥವಾ ಆಡಳಿತ ಪ್ರಾಂತ ಅಥವಾ ಮಂಡಳ, ಕಾಲಗತಿಯಲ್ಲಿ ಈ ಪದವನ್ನು ಸಮುದಾಯವಾಗಿ ರೂಪು ತಳೆಯುವ ಕುಟುಂಬಗಳ ಸಂಕಲನ ಎಂಬುದಾಗಿ ಮಾನವಶಾಸ್ತ್ರಜ್ಞರು ಹಾಗೂ ಸಮಾಜ ಶಾಸ್ತ್ರಜ್ಞರು ಅರ್ಥೈಸಿದ್ದಾರೆ. ಮೂಲತಃ ಷೆಡ್ಯೂಲ್ಡ್ ಟ್ರೈಬ್ಸ್ ಅಥವಾ ಪರಿಶಿಷ್ಟ ಪಂಗಡಗಳು ಎಂಬ ಪದವು ಆಡಳಿತಾತ್ಮಕ ಅನುಕೂಲತೆಗಾಗಿ ಸೃಷ್ಟಿಸಿರುವ ಪರಿಕಲ್ಪನೆಯಾಗಿದೆ. ಇದನ್ನು 1928ರಲ್ಲಿ ಸೈಮನ್ ಕಮಿಷನ್ ನಲ್ಲಿ ಪ್ರಪ್ರಥಮವಾಗಿ ಪರಿಚಯಿಸಲಾಯಿತು.

**ಭಾರತದಲ್ಲಿ ಆದಿವಾಸಿಗಳ ಜನಸಂಖ್ಯೆ**

ದಕ್ಷಿಣ ಆಫ್ರಿಕಾವನ್ನು ಬಿಟ್ಟರೆ ಇಡೀ ಜಗತ್ತಿನಲ್ಲಿ ಅತ್ಯಂತ ಹೆಚ್ಚಿನ ಸಂಖ್ಯೆಯ ಆದಿವಾಸಿಗಳನ್ನು ಹೊಂದಿರುವ ದೇಶವೆಂದರೆ ಭಾರತವಾಗಿದೆ.

ಭಾರತದ 1971 ನೇ ಜನಗಣತಿಯ ಪ್ರಕಾರ ಭಾರತದ ಒಟ್ಟು ಜನಸಂಖ್ಯೆಯ ಶೇ 7.5 ರಷ್ಟು ಆದಿವಾಸಿಗಳಿದ್ದರು, 1981 ರಲ್ಲಿ ಶೇ 7.8 ಮತ್ತು 2011 ರಲ್ಲಿ ಆದಿವಾಸಿಗಳ ಸಂಖ್ಯೆಯು ಶೇ. 8.6 ಕ್ಕೆ ಹೆಚ್ಚಳವಾಯಿತು. ಮಧ್ಯ ಪ್ರದೇಶದಲ್ಲಿ ಭಾರತದ ಒಟ್ಟು ಆದಿವಾಸಿಗಳ ಜನಸಂಖ್ಯೆಯ ಅತಿ ಹೆಚ್ಚು ಅಂದರೆ ಶೇ 14.7 ರಷ್ಟು ಜನಸಂಖ್ಯೆಯನ್ನು ಹೊಂದಿದೆ. ಮೇಘಾಲಯ ರಾಜ್ಯವು ಅತ್ಯಂತ ಕಡಿಮೆ ಆದಿವಾಸಿ ಜನಸಂಖ್ಯೆಯನ್ನು ಅಂದರೆ ಶೇ 2.5 ರಷ್ಟನ್ನು ಹೊಂದಿದೆ.

2011ರ ಜನಗಣತಿಯಂತೆ ಬಿಲ್ಲ ಬುಡಕಟ್ಟು ಜನಾಂಗವು ಭಾರತದಲ್ಲಿ ಅತ್ಯಂತ ಹೆಚ್ಚು ಜನಸಂಖ್ಯೆಯನ್ನು ಹೊಂದಿದ್ದು ಇವರು ಛತ್ತಿಸಘಡ್, ಗುಜರಾತ್, ಮಧ್ಯಪ್ರದೇಶಗಳಲ್ಲಿ ಹೆಚ್ಚಾಗಿ ಕಂಡುಬರುತ್ತಾರೆ. ಗೊಂಡಾ ಬುಡಕಟ್ಟು ಜನಾಂಗವು ಜನಸಂಖ್ಯಾ ದೃಷ್ಟಿಯಿಂದ ದ್ವಿತೀಯಸ್ಥಾನವನ್ನು ಹೊಂದಿದೆ. ಈ ಬುಡಕಟ್ಟು ಮಧ್ಯ ಪ್ರದೇಶ, ಮಹಾರಾಷ್ಟ್ರ, ಒರಿಸ್ಸಾ, ಆಂಧ್ರ ಪ್ರದೇಶಗಳಲ್ಲಿ ಹೆಚ್ಚು ಸಂಖ್ಯೆಯಲ್ಲಿ ಕಂಡು ಬರುತ್ತಾರೆ.

ಭಾರತದ ಸಂವಿಧಾನದ 342ನೇ ಕಲ ಮಿಲನ ಪ್ರಕಾರ ಆದಿವಾಸಿ ಪಂಗಡಗಳನ್ನು ಪರಿಶಿಷ್ಟ ಜನಾಂಗಗಳೆಂದು ಅಥವಾ ಬುಡಕಟ್ಟುಗಳು Sಛಿheಜuಟeಜ ಖಿಡಿibes ಎಂದು ಕರೆಯಲಾಗಿದೆ. ಭಾರತದ ಸಂವಿಧಾನದ ಆದೇಶ 1950 ರಂತೆ ಭಾರತದ 22 ರಾಜ್ಯಗಳಲ್ಲಿ 744 ಬುಡಕಟ್ಟು ಜನಾಂಗಗಳನ್ನು ತನ್ನ ಮೊದಲ ಪಟ್ಟಿಯಲ್ಲಿ ಗುರುತಿಸಿದೆ.

ಆದಿವಾಸಿಗಳು ತಮ್ಮದೆ ಅದ ಲಕ್ಷಣಗಳನ್ನು ಹೊಂದಿದ್ದಾರೆ ಅವುಗಳೆಂದರೆ ಸಾಮಾನ್ಯ ಭೂಪ್ರದೇಶ, ವಿಶಿಷ್ಟ ನಾಮಾಂಕಿತ, ಸಾಮಾನ್ಯ ಭಾಷೆ, ಪೂರ್ವಜರಲ್ಲಿ ನಂಬಿಕೆ, ರಕ್ತ ಸಂಬಂಧದ ಭಾಂದವ್ಯ, ಧಾರ್ಮಿಕ ನಂಬಿಕೆಗಳು, ರಾಜಕೀಯ ವಿಶೇಷ ವ್ಯವಸ್ಥೆ, ಸರಳ ಸ್ವಯಂ ಪರಿಪೂರ್ಣ ಸಮೂಹ, ಐಕ್ಯತೆಯ ಭಾವನೆ, ರಕ್ಷಣೆಯ ಅಗತ್ಯ, ಒಳ ಪಂಗಡ ವಿವಾಹ ಸಮೂಹವಾಗಿದ್ದು ವಿಶಿಷ್ಟ ಸಂಸ್ಕೃತಿಯನ್ನು ಹೊಂದಿರುತ್ತವೆ.

ಬುಡಕಟ್ಟು ಜನರು ತಮ್ಮದೆ ಆದ ಹಲವು ಸಮಸ್ಯೆಗಳನ್ನು ಹೊಂದಿದ್ದಾರೆ ಅವುಗಳೆಂದರೆ

1) ಪ್ರಾದೇಶಿಕ ಪ್ರತ್ಯೇಕತೆಯ ಸಮಸ್ಯೆ
2) ಆರ್ಥಿಕ ಸಮಸ್ಯೆಗಳು: ಬಡತನ, ನಿರುದ್ಯೋಗ, ಬುಡಕಟ್ಟು ಜನರ ಭೂಮಿಯ ಪರಭಾರೆ ಅತಿಯಾದ ಋಣಭಾರ, ಕೃಷಿ ಸಮಸ್ಯೆಗಳು, ಬ್ಯಾಂಕಿಗ್ ಸೌಲಭ್ಯಗಳ ಕೊರತೆ,
3) ಸಾಮಾಜಿಕ ಸಮಸ್ಯೆಗಳು : ಹೆಣ್ಣು ಶಿಶು ಹತ್ಯೆ, ಬಹು ಪತಿತ್ವ, ಬಾಲ್ಯ ವಿವಾಹ, ವರದಕ್ಷಿಣೆ ಲೈಂಗಿಕ ನಿಯಮಗಳ ಶಿಥಿಲತೆ,
4) ಸಾಂಸ್ಕೃತಿಕ ಸಮಸ್ಯೆಗಳು
5) ನಿರಕ್ಷರತೆ ಸಮಸ್ಯೆ

6) ಆರೋಗ್ಯ ಹಾಗೂ ನೈರ್ಮಲ್ಯದ ಸಮಸ್ಯೆ
7) ಅತಿಪಾನಿಯತೆಯ ಸಮಸ್ಯೆ
8) ನಾಯಕತ್ವದ ಸಮಸ್ಯೆ

**ಮಾನವ ಹಕ್ಕುಗಳ ಹಿನ್ನಲೆ ಮತ್ತು ಅರ್ಥ**

ಶ್ರೀ ಮತಿ ಫ್ರಾಂಕ್ಲಿನ್ ಡಿ. ರೂಸ್ ವೆಲ್ಟ್ ರವರ ಅಧ್ಯಕ್ಷತೆಯಲ್ಲಿ ಅಂತರ ರಾಷ್ಟ್ರೀಯ ಮಾನವ ಹಕ್ಕುಗಳ ರಚನೆಗಾಗಿ ಒಂದು ಆಯೋಗವನ್ನು ರಚಿಸಲಾಯಿತು. ಆ ಆಯೋಗವು ತನ್ನ ತನ್ನ ರಚನಾ ಕಾರ್ಯವನ್ನು ಸಾಕಷ್ಟು ಯಶಸ್ವಿಯಾಗಿ ಮುಗಿಸಿ ಅಂತರ ರಾಷ್ಟ್ರೀಯ ಮಾನವ ಹಕ್ಕುಗಳ ಕರಡು ಪ್ರತಿಯನ್ನು 1948 ನೇ ಇಸವಿ ಜೂನ್ ಮಾಹೆಯಲ್ಲಿ ವಿಶ್ವ ಸಂಸ್ಥೆಯ ಜನರಲ್ ಅಸೆಂಬ್ಲಿಗೆ ಸಲ್ಲಿಸಿತು. ವಿಶ್ವ ಸಂಸ್ಥೆಯ ಜನರಲ್ ಅಸೆಂಬ್ಲಿಯು ಆ ಬಗ್ಗೆ ಸುದೀರ್ಘ ಚರ್ಚೆ ನಡೆಸಿ, 1948ನೇ ಇಸವಿ ಡಿಸೆಂಬರ್ 10 ರಂದು ಅಂತರರಾಷ್ಟ್ರೀಯ ಮಾನವ ಹಕ್ಕುಗಳನ್ನು ಘೋಷಿಸಿತು. ಈ ಹಿನ್ನಲೆಯಲ್ಲಿ ಡಿಸೆಂಬರ್ 10 ರಂದು ಅಂತರಾಷ್ಟ್ರೀಯ ಮಾನವ ಹಕ್ಕುಗಳ ದಿನವೆಂದು ಆಚರಿಸಲಾಗುತ್ತದೆ.

ಅಂತರ ರಾಷ್ಟ್ರೀಯ ಮಾನವ ಹಕ್ಕುಗಳ ಘೋಷಣಾ ಪತ್ರದಲ್ಲಿ ಪ್ರಜಾಸತ್ತಾತ್ಮಕ ರಾಷ್ಟ್ರಗಳಲ್ಲಿ ವ್ಯಕ್ತಿಯೊಬ್ಬನು ಹೊಂದಿರಬಹುದಾದ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಹಕ್ಕುಗಳನ್ನು ಸಹ ಈ ಘೋಷಣ ಪತ್ರವು ಒಳಗೊಂಡಿದೆ ಇದರಲ್ಲಿ ಮಾನವ ಹಕ್ಕುಗಳಿಗೆ ಸಂಬಂಧಿಸಿದಂತೆ ವ್ಯಕ್ತಿಯ ಜೀವನ, ಸ್ವಾತಂತ್ರ್ಯ, ಭದ್ರತೆ, ರಕ್ಷಣೆಯ ಹಕ್ಕು, ಅಕ್ರಮ ಬಂಧನದಿಂದ ರಕ್ಷಣೆ, ನ್ಯಾಯ ಯುತವಾಗಿ ಮತ್ತು ಬಹಿರಂಗವಾಗಿ ಸ್ವತಂತ್ರ್ಯವಾಗಿ ಮತ್ತು ನಿಷ್ಪಕ್ಷಪಾತವಾದ ನ್ಯಾಯಾಂಗದಿಂದ ತನಿಖೆಯಾಗ ಬೇಕಾದ ಹಕ್ಕು, ವಿಚಾರವಂತಿಕೆ ಅಂತಃ ಸಾಕ್ಷಿ ಮತ್ತು ಧಾರ್ಮಿಕ ಸ್ವಾತಂತ್ರ್ಯ, ಶಾಂತ ರೀತಿಯಿಂದ ಕೂಡಿರುವ ಮತ್ತು ಸಂಘ ಸ್ಥಾಪನೆಯ ಹಕ್ಕು ಒಳಗೊಂಡಿರುವುದು.

ಪ್ರತಿಯೊಬ್ಬ ವಯಸ್ಕ ಪುರುಷ ಮತ್ತು ಮಹಿಳೆ ತಮಗೆ ಇಷ್ಟವುಳ್ಳವರೊಂದಿಗೆ ವಿವಾಹವಾಗಲು ಮತ್ತು ತಮ್ಮದೆ ಆದ ಕುಟುಂಬಗಳನ್ನು ರಚಿಸಿಕೊಳ್ಳಲು, ಉದ್ಯೋಗವನ್ನು ಅವಲಂಬಿಸಲು ಯೋಗ್ಯ ರೀತಿಯ ಕೆಲಸದ ವೇಳೆ, ಯೋಗ್ಯ ರೀತಿಯ ಸಂಬಳ, ನಿರುದ್ಯೋಗ ಭತ್ಯೆ ಹೊಂದಲು, ಕಾರ್ಮಿಕ ಸಂಘಟನೆಯಲ್ಲಿ ಭಾಗವಹಿಸಲು, ದೇಶವನ್ನು ಬಿಟ್ಟು ಹೋಗಲು ಹಿಂತಿರುಗಿ ಬಂದು ಸೇರಿಕೊಳ್ಳಲು, ರಾಷ್ಟ್ರೀಯತೆಯನ್ನು ಹೊಂದಲು ಇಲ್ಲವೇ ಬದಲಾಯಿಸಲು ಸರ್ಕಾರದ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಹಕ್ಕುಳ್ಳವನಾಗಿರುತ್ತಾನೆ.

ಈ ಘೋಷಣಾ ಪತ್ರದ ಪ್ರಣಾಳಿಕೆಯಲ್ಲಿ ಈ ಮಾನವ ಹಕ್ಕುಗಳನ್ನು ಎಲ್ಲಾ ಜನರಿಗೂ ಎಲ್ಲಾ ರಾಷ್ಟ್ರಗಳಿಗೂ ಅನ್ವಯವಾಗುವ ಸಮಾನ ರೀತಿಯಲ್ಲಿ ದೊರಕಿಸಿಕೊಡಲು ಪ್ರಯತ್ನಿಸುವುದೇ ತನ್ನ ಉದ್ದೇಶ ಎಂಬುದಾಗಿ ಘೋಷಿಸಲಾಗಿದೆ.

**ಬುಡಕಟ್ಟು ಜನಾಂಗದ ಮಾನವ ಹಕ್ಕುಗಳ ಉಲ್ಲಂಘನೆಯ ಪರಿಣಾಮಗಳೆಂದರೆ**

1) ಬ್ರಿಟಿಷ್ ಸರ್ಕಾರದ ಅಬಕಾರಿ ಕಾನೂನುಗಳು ಕುಡಿತ ಮತ್ತು ಅನೈತಿಕತೆ ಹೆಚ್ಚಿಸಿದವು.
2) ಆದಿವಾಸಿಗಳ ಬಗ್ಗೆ ಕಾಳಜಿ, ಆಸ್ಥೆ ಹಾಗೂ ಗೌರವ ಇಲ್ಲದ ಅಧಿಕಾರಿಗಳಿಂದ ಆದಿವಾಸಿಗಳ ಜೀವನ ಅಸ್ತವ್ಯಸ್ತವಾಯಿತು.

3) ವಂಶಪಾರಂಪರ್ಯ ಜುಮ್ ಗಳ ಪ್ರದೇಶಗಳನ್ನು ವರ್ಗೀಕೃತವಲ್ಲದ ರಾಜ್ಯಾರಣ್ಯವೆಂದು ಘೋಷಿಸಿ ಆದಿವಾಸಿಗಳಿಗೆ ನೆಲೆ ಇಲ್ಲದಂತಾಯಿತು.
4) ಆದಿವಾಸಿಗಳ ಭೂಮಿಯಲ್ಲಿದ್ದ ನೈಸರ್ಗಿಕ ಸಂಪರ್ಕವನ್ನು ಬಳಸದಂತೆ ಆಧುನಿಕ ಒಡೆಯರು ನಿಷೇಧಿಸಿದರು.
5) ಆದಿವಾಸಿ ಸಮಾರಂಭಗಳು ಹಬ್ಬಗಳು, ಸಾಮೂಹಿಕ ನೃತ್ಯ ಅಥವಾ ಕುಣಿತಗಳು ಇವುಗಳನ್ನು ರದ್ದು ಮಾಡಿ ಆ ಜಾಗದಲ್ಲಿ ವಾರದ ಸಂತೆ ಆಧುನಿಕ ಮಾದರಿಯ ಉತ್ಸವಗಳಿಗೆ ಅವಕಾಶ ಕೊಟ್ಟಿದ್ದು ಪರಾವಲಂಬನೆಗೆ ಮತ್ತು ಆರ್ಥಿಕ ನಾಶಕ್ಕೆ ಕಾರಣವಾದವು.
6) ಆದಿವಾಸಿ ಪದ್ಧತಿಗಳು, ನಂಬುಗೆಗಳು ಮತ್ತು ಆಚರಣೆಗಳು ಬ್ರಿಟಿಷರು ಜಾರಿಗೊಳಿಸಿದ ಸಂಕೀರ್ಣವಾದ ಕಾನೂನು ಮತ್ತು ನ್ಯಾಯ ಪದ್ಧತಿಗೆ ಭಿನ್ನವಾಗಿದ್ದಿತು.
7) ಆದಿವಾಸಿಗಳ ಮೇಲಾಗುತ್ತಿದ್ದ ಕ್ರೈಸ್ತ ಮತ್ತು ಹಿಂದೂ ಧಾರ್ಮಿಕ ಸಂಸ್ಥೆಗಳ ಪ್ರಭಾವದಿಂದ ಸಾಂಸ್ಕೃತಿಕ ಗೊಂದಲಕ್ಕೆ ಒಳಗಾಗ ಬೇಕಾಯಿತು.
8) ಪರಕೀಯರ ಸಂಪರ್ಕದಿಂದ ಲೈಂಗಿಕ ಅಂಟು ರೋಗಗಳಿಂದ ಒಳಗಾಗ ಬೇಕಾಯಿತು.

ಆದಿವಾಸಿ ಸಮೂಹಗಳಿಗೆ ಸಾಂವಿಧಾನಿಕ ಸವಲತ್ತು ಯೋಜನೆಗಳು ಸಮಿತಿಗಳು, ಆಯೋಗಗಳು, ನೀತಿಗಳು, ಕಲ್ಯಾಣ ಕಾರ್ಯಕ್ರಮಗಳು ರೂಪಿಸಿರುವುದಲ್ಲದೆ ಮಾನವ ಹಕ್ಕುಗಳ ಆಯೋಗವು ಸಹ ಅಭಿವೃದ್ಧಿ ಮತ್ತು ರಕ್ಷಣೆಗೆ ಕಾರ್ಯನಿರ್ವಹಿಸುತ್ತಿವೆ.

## ಉಪಸಂಹಾರ

ಒಟ್ಟಾರೆ ಬುಡಕಟ್ಟು ಜನಾಂಗದ ಮಾನವ ಹಕ್ಕುಗಳ ಹಿನ್ನಲೆಯಲ್ಲಿ ನೋಡುವುದಾದರೆ, ಬುಡಕಟ್ಟು ಜನಾಂಗದ ಹಕ್ಕುಗಳ ರಕ್ಷಣೆಯಲ್ಲಿ ಭಾರತದಲ್ಲಿ ಹಲವಾರು ಕಲ್ಯಾಣ ಕಾರ್ಯಕ್ರಮಗಳು, ಯೋಜನೆಗಳು ರೂಪುಗೊಳಿಸಲಾಗಿದೆ, ಅಲ್ಲದೆ ಅಂತರ ರಾಷ್ಟ್ರೀಯ ಮಾನವ ಹಕ್ಕುಗಳ ಸಮಿತಿಯೂ ಸಹ ಇವರ ರಕ್ಷಣೆ ಮತ್ತು ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಕೆಲವು ಸಂದರ್ಭಗಳಲ್ಲಿ ಅನುಷ್ಠಾನಗೊಳಿಸುವಲ್ಲಿ ಆಡಳಿತ ಯಂತ್ರದ ವಿಫಲತೆಯಿಂದಾಗಿ ಬುಡಕಟ್ಟುಗಳು ಶೋಷಣೆ ಅನುಭವಿಸುವುದನ್ನು ಕಾಣಬಹುದು. ಅದುದರಿಂದ ಸರ್ಕಾರ ಮತ್ತು ಆಡಳಿತ ಯಂತ್ರ ಅನುಷ್ಠಾನಗೊಳಿಸುವಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡ ಬೇಕಾಗುತ್ತದೆ.

## ಆಧಾರ ಗ್ರಂಥಗಳು

[1] ಭಾರತೀಯ ಸಮಾಜ ಸಂರಚನೆ ಮತ್ತು ಪರಿವರ್ತನಕೆ - ಕೆ. ಭೈರಪ್ಪ
[2] ಸಮಾಜ ಶಾಸ್ತ್ರದ ಪ್ರಾಥಮಿಕ ತತ್ವಗಳು ಸಂಪುಟ-2 -ಚ.ನ. ಶಂಕರ್ ರಾವ್
[3] ಭಾರತೀಯ ಸಮಾಜದ ಸಮಾಜಶಾಸ್ತ್ರ - ಜಿ ಸುಬ್ರಮಣ್ಯ
[4] ಜನಗಣತಿ ವರದಿ, 2011.
[5] Dr. Yogeesh N. "ಸಮೂಹದಲ್ಲಿ ಕಲಿಯುವವರ ವರ್ತನೆಗಳು". Educreation International Publication, 2018.
[6] Dr. Yogeesh N. "ಕಲಿಕೆಯ ಮೇಲೆ ಪ್ರಭಾವ ಬೀರುವ ಅಂಶಗಳು". Educreation International Publication, 2018.